ದಿನಾಂಕಃ 10.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : 2ನೇ ಎದುರುದಾರರ ಪರ ವಕೀಲರಿಂದ :**

ನನಗೆ ದ್ವಿಚಕ್ರ ವಾಹನ ಚಾಲನೆ ಮಾಡಲು ಪರವಾನಗಿ ಇದೆ. ಸದರಿ ಪರವಾನಗಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಅಪಘಾತದ ಬಗ್ಗೆ ವೈದ್ಯರಿಗೆ ನನ್ನ ಹೆಂಡತಿ ಮಾಹಿತಿ ಕೊಟ್ಟಿರುತ್ತಾರೆ. ಸದರಿ ವಿವರವನ್ನು ನಾನು ಹೇಳಿ ಬರೆಯಿಸಿರುತ್ತೇನೆ. ನಾನು ಹೇಳಿದಂತೆ ನನಗೆ 1ನೇ ಎದುರುದಾರರ ವಾಹನ ಗುದ್ದಿರುವುದಿಲ್ಲ ಹಾಗೂ ನನಗೆ ಬೇರೆ ಯಾವುದೋ ಕಾರು ಡಿಕ್ಕಿಪಡಿಸಿರುತ್ತದೆ ಎಂದರೆ ಸುಳ್ಳು. ಸದರಿ ಕಾರಿಗೆ ವಿಮೆ ಇಲ್ಲದ ಕಾರಣ ನಾನು ವಿಮೆ ಪರಿಹಾರ ಪಡೆದುಕೊಳ್ಳುವ ಸಲುವಾಗಿ 1ನೇ ಎದುರುದಾರರ ವಾಹನದ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣದಿಂದಲೇ 20 ದಿನ ತಡವಾಗಿ ಪೊಲೀಸರಿಗೆ ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. 1ನೇ ಎದುರುದಾರರ ವಾಹನದಿಂದ ಅಪಘಾತವಾಗಿದ್ದರೇ ನಾನು ಆಸ್ಪತ್ರೆಯಲ್ಲಿ ನನಗೆ ಕಾರು ಅಪಘಾತಪಡಿಸಿರುತ್ತದೆ ಎಂದು ಬರೆಯಿಸಿರುತ್ತಿರಲಿಲ್ಲ ಎಂದರೆ ಸರಿಯಲ್ಲ. 1ನೇ ಎದುರುದಾರರು ಮತ್ತು ಪೊಲೀಸರ ಜೊತೆ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**2.** ನಾನು ಮಾಸಿಕವಾಗಿ ರೂ.22,000/- ಸಂಪಾದನೆ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ. ನನಗೆ ನಾನು ಹೇಳಿದಷ್ಟು ಆದಾಯ ಇಲ್ಲ ಎಂದರೆ ಸರಿಯಲ್ಲ. ನಾನು ಚಿಕಿತ್ಸೆಗಾಗಿ ಒಳರೋಗಿಯಾಗಿ 30 ದಿನ ಆಸ್ಪತ್ರೆಗೆ ದಾಖಲಾಗಿಲ್ಲ ಹಾಗೂ 3 ಲಕ್ಷ ರೂ.ಗಳನ್ನು ಚಿಕಿತ್ಸೆಗಾಗಿ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿದ್ದ

ಸಮಯದಲ್ಲಿ ಪ್ರತಿದಿನ 400/- ರೂ.ಗಳನ್ನು ಸಹಾಯಕನಿಗೆ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಹೊರರೋಗಿಯಾಗಿ ಚಿಕಿತ್ಸೆ ಪಡೆಯುವಾಗ ವಾಹನ ಮತ್ತು ಇತರೇ ಖರ್ಚು ಪ್ರತಿಬಾರಿಗೆ ರೂ.4,000/- ಮಾಡಿಲ್ಲ ಎಂದರೆ ಸುಳ್ಳು. ಭವಿಷ್ಯದ ಚಿಕಿತ್ಸೆಗಾಗಿ ರೂ.30,000/- ಅವಶ್ಯಕತೆ ಇಲ್ಲ ಎಂದರೆ ಸುಳ್ಳು. ನನ್ನ ಬೈಕ್ ಜಖಂ ಆಗಿ ರೂ.30,000/- ನಷ್ಟ ಆದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ ಎಂದರೆ ಸುಳ್ಳು. ಅಪಘಾತಕ್ಕೂ ಮುಂಚೆ ನಾನು ಚೆನ್ನಾಗಿದ್ದು, ಈಗಲೂ ಸಹ ಚೆನ್ನಾಗಿರುತ್ತೇನೆ ಎಂದರೆ ಸುಳ್ಳು. ಅಪಘಾತ ನನ್ನ ತಪ್ಪಿನಿಂದ ಆಗಿದ್ದು ವಿಮೆ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ದಾಖಲೆಗಳನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರ ವಾಹನ ಅಪಘಾತ ಮಾಡದೇ ಇರುವ ಕಾರಣ 2ನೇ ಎದುರುದಾರರು ಪರಿಹಾರ ಕೊಡಲು ಭಾದ್ಯಸ್ಥರಿರುವುದಿಲ್ಲ ಎಂದರೆ ಸರಿಯಲ್ಲ. ನಾನು 03.12.1964 ರಲ್ಲಿ ಜನಿಸಿರುತ್ತೇನೆ ಎಂದರೆ ಸರಿ. ನನಗೆ ಕಡಿಮೆ ವಯಸ್ಸೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವಯಸ್ಸಾದ ಕಾರಣ ಆರೋಗ್ಯ ಸಮಸ್ಯೆಗಳು ಇದ್ದು, ಅಪಘಾತದಿಂದ ಯಾವುದೇ ತೊಂದರೆ ಆಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**